ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರು ತಾವು ಕುಳಿತುಕೊಳ್ಳಿ. ತಮಗೆ ಎಷ್ಟು ಸಾರಿ ಹೇಳಬೇಕು ? ಮಾನ್ಯ ಎನ್. ಹೆಚ್. ಗೌಡರು ತಮ್ಮ ಪ್ರಶ್ನೆಯನ್ನು ಕೇಳಿ.

SRI F. G. R. SINDHIA.—We have already suspended the Sub-Inspector and the Circle Inspector and we have ordered for a C.O.D. and enquiry What else the Government can do ?

ಉತ್ತರ ಕನ್ನಡ ಜಿಲ್ಲೆಯಲ್ಲಿ ವೈದ್ಯರ ಕೊರತೆ.

೨೮೯೧. ಶ್ರೀ ಎನ್. ಹೆಚ್. ಗೌಡ (ಕುಮಟಾ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಅನೇಕ ಸರ್ಕಾರದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ.

ಆ) ವೈದ್ಯರ ಕೊರತೆಯನ್ನು ತುಂಬಲು ಸರಕಾರದವರು ಕೈಗೊಂಡಿರುವ ಕ್ರಮವೇನು.

ಇ) ಸದರಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಲೋಕಸೇವಾ ಆಯೋಗದಿಂದ ಆಯ್ಕೆಯಾದ ಪುರುಷ ಮಹಿಳಾ ವೈದ್ಯಾಧಿಕಾರಿಗಳಲ್ಲಿ ದಿನಾಂಕ ೯-೮-೧೯೮೮ ರಂದು ಹೊರಡಿಸಿದ ಸರ್ಕಾರದ ಆದೇಶದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ ೧೧ ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆ.

ಇ) ಉತ್ತರ ಕನ್ನಡ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನುಳಿದ ೧೪ ಖಾಲಿ ಹುದ್ದೆಗಳನ್ನು ಆದಷ್ಟು ಬೇಗ ತುಂಬಲಾಗುವುದು.

ಶ್ರೀ ಎನ್. ಹೆಚ್. ಗೌಡ.—ಮಾನ್ಯ ಅಧ್ಯಕ್ಷರೆ, ದಿನಾಂಕ ೯-೮-೧೯೮೮ ರಂದು ೧೧ ಜನ ಮಹಿಳಾ ಹಾಗೂ ಪುರುಷ ವೈದ್ಯರನ್ನು ನೇಮಿಸಿದ್ದುದು ಸತ್ಯ. ಮಾನ್ಯ ಸಚಿವರು ಆಡಿದ ಮಾತು ಸತ್ಯ ಆದರೆ ಒಂದು ಸಂಗತಿಯಿದೆ. ಸರ್ಕಾರ ಯಾವ ವೈದ್ಯರನ್ನು ನೇಮಿಸಿದರೂ ಆ ವೈದ್ಯರು ನೇಮಿಸಿದಂತಹ ದಾಪಾಖಾನೆಗೆ ಹೋಗಿ ತಮ್ಮ ಕೆಲಸ ನಡೆಸಿದ್ದಾರೆಯೇ ಎನ್ನುವುದು. ಉದಾಹರಣೆಗೆ ಹೇಳುವುದಾದರೆ ನನ್ನ ಮತದಾರರ ಕ್ಷೇತ್ರವಾದ ಗೋಕರ್ಣ ಹಿರೇಗುತ್ತಿ ಹಾಗೂ ಕುಮಟಾ ಈ ಮೂರು ಕಡೆಗಳಿಗೆ ಮೂರು ಮಹಿಳಾ ವೈದ್ಯರನ್ನು ನೇಮಿಸಲಾಗಿತ್ತು ಆವರು ಅಲ್ಲಿಗೆ ಬಂದು ಕೆಲಸಕ್ಕೆ ಸೇರಿಕೊಳ್ಳಲಿಲ್ಲ. ಹಾಗಾಗಿ ಕುಮಟಾದಲ್ಲಿ ಪರಿಸ್ಥಿತಿ ಬಹಳ ಬಿಗಡಾಯಿಸುತ್ತಾ ಉಂಟು. ಕುಮಟಾದಲ್ಲಿ ನಾಲ್ಕು ವೈದ್ಯರು ಇರಬೇಕಾಗಿತ್ತು ಈಗ ಅಲ್ಲಿ ಒಬ್ಬ ವೈದ್ಯರು ಕೆಲಸ ಮಾಡುತ್ತಿದಾರೆ. ಆ ವೈದ್ಯರು ಎಷ್ಟು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆಂದರೆ ಮುಂಜಾನೆ ೮ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆಕೆಲಸಮಾಡ್ತಿದಾವಾಖಾನೆಯಲ್ಲಿ ದುಡಿಯುತ್ತಿದ್ದಾರೆ. ಅವರ ಸ್ಥಿತಿ ಈಗ ಏನಾಗುತ್ತಿದೆ?ಎಂದರೆ ಯಾರು ಜನರ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದರೋ ಆ ವೈದ್ಯರೇ ಅನಾರೋಗ್ಯದಿಂದ ಬಳಲುವಂತಹ ಪರಿಸ್ಥಿತಿ ಬಂದಿದೆ. ಯಾರನ್ನೆ ಹಾಕಲಿ ಅವರು ಆ ಜಾಗದಲ್ಲಿ ಸೇರಿಕೊಳ್ಳದಿದ್ದರೆ ಅಂತಹ ವೈದ್ಯರುಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳತಕ್ಕ ಆಸ್ಪತ್ರೆಗಳಿಗೆ ನಾವು ಕಳುಹಿಸಿರತಕ್ಕ ವೈದ್ಯರು ರಿಪೋರ್ಟ್ ಮಾಡಿಕೊಳ್ಳದಿದ್ದರೆ ಅವರ ಮೇಲೆ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅಲ್ಲಿ ಬೇರೆಯವರನ್ನು ಹಾಕಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ. ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ೨೪೨ ವೆಕೆನ್ಸಿಗಳು ಇವೆ. ಅಕ್ಟೋಬರ್‌ನಲ್ಲಿ ಪೋಸ್ಟ್

ಗ್ರಾಜುಯೇಟ್ ಕೋರ್ಸ್ ಆದ ಅಸಿಸ್ಟೆಂಟ್ ಸರ್ಜನ್ಸ್, ತರಬೇತಿ ಮುಗಿಸಿಕೊಂಡು ವಾಪಸು ಬರುತ್ತಾರೆ. ಅವರನ್ನು ಎಲ್ಲೆಲ್ಲಿ ವೆಕೆನ್ಸಿಗಳು ಇವೆ, ಅಲ್ಲೆಲ್ಲಾ ಫಿಲಪ್ ಮಾಡುತ್ತೇವೆ. ಮಾನ್ಯ ಗೌಡರು ಹೇಳತಕ್ಕ ೧೪ ವೆಕೆನ್ಸಿಗಳು ಏನಿವೆ ಅವು ಟಿಡಿಬಿಯವರು ನಡೆಸುತ್ತಿದ್ದ ಆಸ್ಪತ್ರೆಗಳಲ್ಲಿರತಕ್ಕ ವೆಕೆನ್ಸಿಗಳು. ಟಿಡಿಬಿ ಆಸ್ಪತ್ರೆಗಳನ್ನು ಸರ್ಕಾರ ತೆಗೆದುಕೊಂಡಿದೆ ಅವುಗಳನ್ನು ಅಪ್‌ಗ್ರೇಡ್ ಮಾಡತಕ್ಕ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಅದು ಆದ ಮೇಲೆ ಮಾನ್ಯ ಸದಸ್ಯರು ಹೇಳತಕ್ಕ ವೆಕೆನ್ಸಿಗಳನ್ನು ತುಂಬಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಎನ್. ಹೆಚ್. ಗೌಡ.— ವೈದ್ಯರನ್ನು ಹುಡುಕುವಂತಹ ಪ್ರಸಂಗ ನಮ್ಮಲ್ಲಿ ಬಂದಿದೆ. ವೈದ್ಯರನ್ನು ನಾವೇ ಹುಡುಕಿ ತಂದರೆ ಆಗಲಾವರೂ ಸರ್ಕಾರ ನೇಮಕ ಮಾಡುತ್ತದೆಯೇ ಎಂದು ಕೇಳುತ್ತೇನೆ.

ಅಧ್ಯಕ್ಷರು.— ಎಷ್ಟು ಸಾರಿ ಹೇಳಬೇಕು ನಿಮಗೆ ? ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಸಿಂಧ್ಯಾರವರೇ ನೀವು ಅವರನ್ನು ಕರೆದು ಪಕ್ಕದಲ್ಲಿ ಕೂಡಿಸಿಕೊಂಡು ಉತ್ತರ ಹೇಳಿ.

ಶ್ರೀ ಎನ್. ಹೆಚ್. ಗೌಡ.— ಇದೊಂದು ಸಣ್ಣ ವಿಷಯ...

ಅಧ್ಯಕ್ಷರು.— ನಾನು ಶ್ರೀ ಕೆ. ಎಚ್. ಪಾಟೀಲರನ್ನು ಕರೆದಿದ್ದೇನೆ. ನೀವು ಈಗ ಕುಳಿತು ಕೊಳ್ಳಿ.

ರಾಜ್ಯದಲ್ಲಿ ವರದಕ್ಷಿಣೆ ಸಾವುಗಳು

೨೯೭೪. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವರದಿಯಾದ ಒಟ್ಟು ವರದಕ್ಷಿಣೆ ಸಾವುಗಳೆಷ್ಟು ?

ಆ) ಶಿಕ್ಷೆಗೊಳಗಾದ ಒಟ್ಟು ಅಪರಾಧಿಗಳೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ)

೧೯೮೬	೧೯೮೭	೧೯೮೮
೬೫	೧೦೫	೧೨೪

ಆ. ೧೯೮೬ರಲ್ಲಿ ಎರಡು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ.
೧೯೮೭ರ ಒಂದು ಪ್ರಕರಣದಲ್ಲಿ ಅಪರಾಧಿಗೆ ಶಿಕ್ಷೆಯಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಇತ್ತೀಚೆಗೆ ತಿಪಟೂರಿನಲ್ಲಿ ಒಬ್ಬ ಡಾಕ್ಟರ್ ತನ್ನ ಹೆಂಡತಿಯನ್ನು ಕೊಂದು ಮತ್ತೊಬ್ಬ ಹೆಂಡತಿಯನ್ನು ಮಾಡಿಕೊಂಡು ಇವತ್ತಿನ ದಿವಸ ಜೀವನ ನಡೆಸುತ್ತಿದ್ದಾನೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅದು ಇದರಲ್ಲಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಎರಡನೆಯದ್ದು, ತಾವು ಹೇಳಿದಂತೆ ೧೯೮೬ರಲ್ಲಿ ೬೫ ಕೇಸುಗಳು ಮತ್ತು ೧೯೮೭ರಲ್ಲಿ ೧೦೫ ಕೇಸುಗಳು ಇದ್ದರೂ ಸಹಿತ ಈ ವರದಕ್ಷಿಣೆ ಸಾವುಗಳ ವಿಷಯವಾಗಿ ತೀವ್ರಗತಿಯಿಂದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅನೇಕ ಸಲ ಸರ್ಕಾರ ದೃಢ ನಿಲುವನ್ನು ವ್ಯಕ್ತ ಮಾಡಿದ್ದೀರಿ. ಆದರೆ ಇಷ್ಟು ದಿನೇ ಆಗಲಿಕ್ಕೆ ನ್ಯಾಯಾಧೀಶರ ವಿಳಂಬ ಕಾರಣವೋ ಅಥವಾ ಪೋಲೀಸ್ ಅಧಿಕಾರಿಗಳು ಕೇಸ್ ಹಾಕುವುದರಲ್ಲಿ ತಡ ಮಾಡಿದ್ದಾರೆಯೇ ನ್ಯಾಯಾಧೀಶರಿಂದ ತಡವಾಗಿದ್ದರೆ ಸ್ಪೆಶಲ್ ಕೋರ್ಟ್ ನೇಮಕ ಮಾಡಿ ತೀವ್ರಗತಿಯಿಂದ ವಿಚಾರಣೆ ಆಗಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾವುದೇ ವರದಕ್ಷಿಣೆ ಸಾವು ಪ್ರಕರಣದಲ್ಲಿ ಸಿ.ಓ.ಡಿ.ಯಿಂದ ಎನ್‌ಕ್ವೈರಿ ಮಾಡುತ್ತೇವೆ. ಇದನ್ನು ಬಹಳ ವೇಗವಾಗಿಯೇ ಮಾಡುತ್ತಿದ್ದಾರೆ. ನ್ಯಾಯಾಲಯದಲ್ಲಿ ಕೇಸುಗಳು ಪೆಂಡಿಂಗ್ ಇವೆ. ಅದಷ್ಟು ಬೇಗ ಇವುಗಳನ್ನು ನಾನು ವಿಚಾರಣೆ ಮಾಡಿ ಇತ್ಯರ್ಥ ಮಾಡಲಿಕ್ಕೆ ನ್ಯಾಯಾಲಯವನ್ನು ನಮ್ಮ ವಕೀಲರ ಮುಂಖಾಂತರ ಕೇಳಿಕೊಳ್ಳುತ್ತೇವೆ. ಇನ್‌ವೆಸ್ಟಿಗೇಶನ್‌ನಲ್ಲಿ ಇದ್ದರೂ ಸಹಿತ ಅದಷ್ಟು ಬೇಗನೆ ಮಾಡಿಸುವುದಕೆ ಪ್ರಯತ್ನ ಮಾಡುತ್ತೇವೆ.